

# ಲಾ ಪಾಜ್ ಮೋಡಗಳನ್ನು ಚುಂಬಿಸುವ ನಗರ

ಬೊಲಿವಿಯ ರಾಜಧಾನಿ ಲಾ ಪಾಜ್ ಪ್ರಾಕೃತಿಕ ಸೌಂದರ್ಯಕ್ಕೂ, ಮನುಷ್ಯ ನಿರ್ಮಿತ ಸ್ಥಾವರಗಳ ಚೆಲುವಿಗೂ ಪ್ರಸಿದ್ಧ. 'ವಿಶ್ವದ ಅತಿ ಎತ್ತರದ ರಾಜಧಾನಿ ನಗರ' ಎಂಬ ಹೆಗ್ಗಳಿಕೆಯೂ ಇದಕ್ಕಿದೆ.

■ ಡಿ.ಜಿ. ಮಲ್ಲಿಕಾರ್ಜುನ

ಪೆರು ಮತ್ತು ಬೊಲಿವಿಯ ದೇಶದ ನಡುವಿರುವ ಲೇಕ್ ಟಿಟಿಕಾಕ ನೋಡಿಕೊಂಡು ಬೊಲಿವಿಯ ದೇಶದ ಗಡಿ ಪ್ರವೇಶಿಸಿದೆವು. ಸ್ಥಳೀಯ ಮೂಲನಿವಾಸಿ ಇಂಡಿಯನ್ನರು ಮಾರುತ್ತಿದ್ದ ದೊಡ್ಡ ಗಾತ್ರದ ಕಡಲೆಕಾಯಿ ನೋಡಿದೊಡನೆ, ಬಿ.ಜಿ.ಎಲ್. ಸ್ವಾಮಿ ಅವರು, 'ಇದು ಕೂಡ ದಕ್ಷಿಣ ಅಮೆರಿಕದ್ದೇ ಕಣ್ರೋ' ಎಂದು ಕಿವಿಯಲ್ಲಿ ಉಸುರಿದಂತಾಯಿತು.

ಹತ್ತು ಡಾಲರಿಗೆ 75 ಬೊಲಿವಿಯಾನೊ ಕರೆನ್ಸಿಯಂತೆ ನಾವುಗಳು ಆ ದೇಶದ ಹಣ ಪಡೆದು, ವೀಸಾ ಪಡೆಯಲು ಹಳೆಯದಾದ ಕಟ್ಟಡವೊಂದರಲ್ಲಿ ಎರಡು ಗಂಟೆ ಕಾಲ ಸಾಲಿನಲ್ಲಿ ನಿಂತು ಪಾಸ್‌ಪೋರ್ಟ್ ಮೇಲೆ ಸೀಲು ಗುದ್ದಿಸಿಕೊಂಡು ಹೊರಬಂದೆವು. ನಂತರ ಬಸ್‌ನಲ್ಲಿ ಏರುಹಾದಿಯಲ್ಲಿ ಲಾ ಪಾಜ್ ನಗರ ತಲುಪಿದೆವು.

ಬೊಲಿವಿಯ ದೇಶದ ರಾಜಧಾನಿ ಲಾ ಪಾಜ್ ಅನ್ನು 'ಮೋಡಗಳನ್ನು ಚುಂಬಿಸುವ ನಗರ' ಎಂದು ಕರೆಯುತ್ತಾರೆ. ಸುಮಾರು ಎಂಟೂವರೆ ಲಕ್ಷ ಜನರಿಗೆ ನೆಲೆಯಾಗಿರುವ ಈ ನಗರ ಕಾಂಕ್ರೀಟ್ ಕಾಡಿನಂತಿದೆ. ವಾಹನಗಳಿಂದ ಕಿಕ್ಕಿರಿದಿರುವ ಈ ನಗರದಲ್ಲಿ ಸದಾ ಹಾರ್ನ್ ಮಾಡುವ ವಾಹನಗಳು, ವರ್ಣರಂಜಿತ ಮಾರುಕಟ್ಟೆಯ ಅಂಗಡಿಗಳು, ತಲೆಯ ಮೇಲೆ ಜನರನ್ನು ನಗರದ ಒಂದೆಡೆಯಿಂದ ಮತ್ತೊಂದೆಡೆಗೆ ಕರೆದೊಯ್ಯುವ ಕೇಬಲ್ ಕಾರ್‌ಗಳು, ಸಾಂಪ್ರದಾಯಿಕ ದಿರಿಸನ್ನು ಧರಿಸಿರುವ ಸ್ಥಳೀಯರು, ವರ್ಣಮಯ ಉಣ್ಣೆ ಬಟ್ಟೆಗಳು, ಹಣ್ಣುಗಳು, ತಿನಿಸುಗಳು... ಒಟ್ಟಾರೆ ಪ್ರವಾಸಿಗರಿಗೆ ಆಕರ್ಷಕವೆನಿಸುವ ತಾಣವಿದು.